ಗ್ರಾಮಗಳಲ್ಲಿಯೇ ದೊರೆಯುತ್ತಿದೆ. ಪ್ರೌಢ ಶಿಕ್ಷಣವು ಹತ್ತಿರದ ಪಂಡ್ಲ ಗ್ರಾಮಾದಲ್ಲಿ ಮತ್ತು ಸಿದ್ದಾಪುರ ಗ್ರಾಮದಲ್ಲಿ ದೊರೆಯುತ್ತಿದೆ.

2) ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಸ್ಥಳೀಯ ಗ್ರಾಮದಲ್ಲಿಯೇ ಲಭ್ಯವಿದೆ. ಪ್ರೌಢ ಶಿಕ್ಷಣವು ಈ ಗ್ರಾಮದಿಂದ ಸುಮಾರು 8 .ಕಿ.ಮೀ. ದೂರದಲ್ಲಿದೆ.

3) ಬಳ್ಳಾಲ ಗ್ರಾಮದಲ್ಲಿ ಹೊಸ ಪ್ರೌಢ ಶಾಲೆ ತರೆಯುವ ಬಗ್ಗೆ ಪ್ರಸ್ತಾಪವಿದ್ದು 1996-97ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಗ್ರಂಥಾಲಯಗಳ ಕುರಿತು.

386 - ಶ್ರೀ ಪಿ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಗ್ರಂಥಾಲಯಗಳೆಷ್ಟು? ಅನೇಕ ಗ್ರಂಥಾಲಯಗಳಲ್ಲಿ ಸಂಬಂಧ ಪಟ್ಟ ಪುಸ್ತಕಗಳು ಇಲ್ಲದೇ ಬರೀ ಹೆಸರಿಗೆ ಮಾತ್ರ ಗ್ರಂಥಾಲಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) 1994-95ನೇ ಸಾಲಿನಲ್ಲಿ ಒಟ್ಟು ಗ್ರಂಥಾಲಯಗಳನ್ನು ಮಂಜೂರು ಮಾಡಿದ್ದಕ್ಕೆ ಆದ ಖರ್ಚು ಎಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) 1) ಗ್ರಂಥಾಲಯಗಳ ಸಂಖ್ಯೆ - 430

2) ಗ್ರಾಮಾಂತರ ಪಂಚಾಯತ್ ಗ್ರಂಥಾಲಯಗಳು - 1051

3) ಪುಸ್ತಕ ವಿತರಣಾ ಕೇಂದ್ರ - 300

-ಇಲ್ಲ-

2) 1994-95ನೇ ಸಾಲಿನಲ್ಲಿ ಯಾವುದೇ ಹೊಸ ಗ್ರಂಥಾಲಯಗಳನ್ನು ಮಂಜೂರು ಆಗಿರುವುದಿಲ್ಲ.

ರಾಜ್ಯ ಅರಣ್ಯ ಕೈಗಾರಿಕಾ ನಿಗಮಕ್ಕೆ ಸೇರಿದ ಸ್ಥಳವನ್ನು ಖಾಸಗಿಯವರಿಗೆ ನೀಡುವ ವಿಚಾರ.

387 - ಶ್ರೀ ಕುಂಚೆ ಸುಂದರರಾವ್ (ಸೂರತಕ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಪಡೀಲಿನಲ್ಲಿರುವ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸೇರಿದ ಸ್ಥಳದ ವಿಸ್ತೀರ್ಣ ಎಷ್ಟು, ಸದರಿ ಜಮೀನನ್ನು ಖಾಸಗಿಯವರಿಗೆ ಕೊಡುವ ಪ್ರಸ್ತಾಪವು ಸರಕಾರದ ಮುಂದಿದೆಯೇ, ಇದ್ದಲ್ಲಿ ಕಾರಣಗಳೇನು?

ಅ) ಈ ಸ್ಥಳವನ್ನು ತಮಗೆ ಕೊಡಬೇಕೆಂದು ಕೋರಿ ಯಾವ ಯಾವ ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಿವೆ, ಅರ್ಜಿಗಳನ್ನು ಪುರಸ್ಕರಿಸುವ ಬಗ್ಗೆ ಸರಕಾರ ನಿರ್ಧರಿಸಿದೆಯೆ?

ಆ) ಆ ಪ್ರದೇಶದ ನಿವಾಸಿಗಳ ಅನುಕೂಲಕ್ಕಾಗಿ ಇರುವ ರಸ್ತೆಯನ್ನು ಅಗಲಗೊಳಿಸಲು ಸದರಿ ಜಾಗವನ್ನು ಬಿಟ್ಟುಕೊಡುವ ಬಗ್ಗೆ ಸಾರ್ವಜನಿಕರ ಮನವಿಯ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) :

ಅ) ವಿಸ್ತೀರ್ಣ 7.23 ಎಕರೆ

ಖಾಸಗಿಯವರಿಗೆ ಜಮೀನನ್ನು ಕೊಡುವ ಪ್ರಸ್ತಾಪವಿಲ್ಲ.

ಆ) ಈ ಸಂಸ್ಥೆಗಳು ಸ್ಥಳದ ಬಗ್ಗೆ ಕೋರಿಕೆ ಸಲ್ಲಿಸಿವೆ.

ಅ) ಮೆ. ವಿಕಾಸ್ ಕಾಲೇಜ್ ಆಫ್ ಫಿಸಿಯೋಥರಪಿ ಮಂಗಳೂರು

ಆ) ಮೆ. ಮಹಾಬಲೇಶ್ವರ ಪ್ರಮೋಟರ್ಸ್ ಅಂಡ್ ಬಿಲ್ಡರ್ಸ್ ಕಂಪನಿ, ಲಿ, ಮಂಗಳೂರು

ಇ) ಸರ್ಕಾರದ ಸಂಸ್ಥೆಯಾದ ಕರ್ನಾಟಕ ಗೇರು ಅಭಿವೃದ್ಧಿ ನಿಗಮ

ಈ ಸ್ಥಳವನ್ನು ಇತರೆ ಖಾಸಗಿ ಸಂಸ್ಥೆಗಳಿಗೆ ನೀಡುವ ಪ್ರಶ್ನೆ ಇಲ್ಲದಿರುವುದರಿಂದ ಸರ್ಕಾರಕ್ಕೆ ಪ್ರಸ್ತಾವವನ್ನು ಸಲ್ಲಿಸಿರುವುದಿಲ್ಲ.

ರಸ್ತೆಯನ್ನು ಅಗಲಪಡಿಸಲು ಸಾರ್ವಜನಿಕರಿಂದ ಮನವಿ ಬಂದಿರುವುದಿಲ್ಲ. ಆದರೆ ಮಂಗಳೂರು ಜಿಲ್ಲಾಧಿಕಾರಿಗಳು ರಸ್ತೆಯನ್ನು ಅಗಲ ಮಾಡಲು ಕಂಪನಿಯ 30 ಅಡಿ ಅಗಲ ಜಾಗವನ್ನು ರಸ್ತೆಯ ಪಕ್ಕದಲ್ಲಿ ಕೋರಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರೌಢ ಶಾಲಾಭಿವೃದ್ಧಿ ಮಂಡಳಿಗಳ ರಚನೆ

388 - ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮಂಡಳಿಗಳನ್ನು ರಚಿಸಬೇಕೆಂಬ ಆದೇಶವು ಜಾರಿಯಲ್ಲಿದೆಯೇ, ಇದ್ದಲ್ಲಿ ಅದನ್ನು ನಿಯಮಗಳಿಗನುಗುಣವಾಗಿ ರಚಿಸಲಾಗುತ್ತಿದೆಯೇ, ನಿಯಮಗಳನ್ನು ಉಲ್ಲಂಘಿಸಿದ ಉದಾಹರಣೆಗಳು ಇವೆಯೇ, ಇದ್ದಲ್ಲಿ ಆ ಕುರಿತು ಸರ್ಕಾರದವರು ಜರುಗಿಸಿದ ಕ್ರಮಗಳೇನು.

ಆ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಒಟ್ಟು ಪ್ರೌಢಶಾಲೆಗಳು ಎಷ್ಟು ಅಲ್ಲಿನ ಎಲ್ಲಾ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು, ರಚಿಸಲ್ಪಟ್ಟ